MYSORE CONTINGENCY FUND (AMENDMENT) BILL, 1965.

Motion to consider.

Sri RAMAKRISHNA HEGDE.—Sir, I beg to move :

"That the Mysore Contingency Fund (Amendment) Bill, 1965, be taken into consideration."

Mr. SPEAKER.—Motion moved :

"That the Mysore Contingency Fund (Amendment) Bill, 1965 be taken into consideration."

Sri RAMAKRISHNA HEGDE.—Sir, this is a very small measure which seeks to enhance the corpus of the contingency fund from Rs. 2 crores to Rs. 4 crores. It has been found necessary to provide for more fund because of the additional expenditure that have to incur. I do not think any more explanation is necessary. I hope the House will approve of the Bill.

† Sri H. R. KESHAVA MURTHY.—Sir, I wholeheartedly oppose this measure because this Government is bent upon spending money lavishly.

Mr. SPEAKER.—But with your consent.

Sri H. R. KESHAVA MURTHY.—We only ratify but do not give real sanction.

Mr. SPEAKER.—The budget is always brought before the House, before the financial year begins.

Sri H. R. KESHAVA MURTHY.—In Britain and other Western countries they do not allow a single pie to be spent without the sanction of the Legislature, but that is not the case here. The Government spends and then takes the approval of the Assembly afterwards. It is almost ratification ; it is not real democracy in action. They are lavishly spending money according to their whims and fancies. Therefore, we are bound to oppose this measure.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—Statement of Objects and Reasons ನಲ್ಲಿ ಹೇಳಿದ್ದಾರೆ : ಮಹಾರಾಷ್ಟ್ರದಲ್ಲಿ 7 ಕೋಟಿ ರೂಪಾಯಿ, ಮದ್ರಾಸಿನಲ್ಲಿ 5 ಕೋಟಿ ಆಂಧ್ರಪ್ರದೇಶದಲ್ಲಿ 5 ಕೋಟಿ ರೂಪಾಯಿ ಕಂಟಿಂಜನ್ಸಿ ಫಂಡ್ ಇದೆ ಎಂದು. ಆದರೆ ಅವರು ಹೇಗೆ ಖರ್ಚು ಮಾಡುತ್ತಾರೆನ್ನುವುದು ನಮಗೆ ಗೊತ್ತಿಲ್ಲ. ಅವರ ಒಳ್ಳೆಯ ಕೆಲಸಗಳಿಗೆ ಖರ್ಚು ಮಾಡುತ್ತಿದ್ದಾರೆಯೆ ಹೇಗೆ ಅನ್ನುವುದು ಗೊತ್ತಿಲ್ಲ. ನಮ್ಮ ಸರ್ಕಾರದವರ ಹಾಗೆ ಕಾರುಗಳನ್ನು ಕೊಂಡುಕೊಳ್ಳುವುದಕ್ಕೆ, ಇಂಡಸ್ಟ್ರಿಗಳಿಗೆ, ಅಲಾರಮ್ ಗಡಿಯಾರ ತಯಾರು ಮಾಡುವುದಕ್ಕೆ, ಫಾರಿನ್ ಕಂಟ್ರಿಗಳಿಗೆ ಹೋಗುವುದಕ್ಕೆ ಅವರು ವಿನಿಯೋಗಿಸುತ್ತಿದ್ದಾರೆಯೆ ಅನ್ನುವುದು ನಮಗೆ ಗೊತ್ತಿಲ್ಲ.

ಇವೊತ್ತು ನಾವು ಇಲ್ಲಿ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ತಂದು ಮಂಡಿಸುವಾಗ ಹೇಳಿದಿರಿ ಬೇಕಾದಾಗ ಮಾತ್ರ ಈ ಕಂಟಿಂಜೆನ್ಸಿ ಫಂಡಿನಿಂದ ಹಣವನ್ನು ಬೇಕಾದರೆ ತೆಗೆದುಕೊಂಡು ಉಪಯೋಗಿಸಿಕೊಳ್ಳುತ್ತೇವೆಯೇ ಹೊರತು ಬೇರೆ ಇಲ್ಲ ಎಂದು ಹೇಳಿದರು. ಆದರೆ ಯಾವ ಯಾವ ಕಮಿಟಿಗಳನ್ನು ಮಾಡುವುದಕ್ಕಾಗಿ ಈ ಹಣ ಉಪಯೋಗಿಸುತ್ತಾರೋ ನಮಗಂತೂ ತಿಳಿಯದು. ಹಿಂದೆ ಒಂದು ಸಾರಿ 1957ನೇ ಇಸವಿಯಲ್ಲಿ ಒಂದು ಕೋಟಿಯಷ್ಟು ಕಂಟೆಂಜೆನ್ಸಿ ಫಂಡನ್ನು ಏತಕ್ಕಾಗಿ ತಂದಿದ್ದೀರಿ ನಮ್ಮ ಮಾನ್ಯ ಸಭಾಧ್ಯಕ್ಷರು ಈ ಸಭೆಯ ಅಧ್ಯಕ್ಷರಾಗಿಲ್ಲದಿದ್ದಾಗ ಅವರೇ ಕೇಳಿದ್ದು ಅವರಿಗೂ ಈಗ ಜ್ಞಾಪಕದಲ್ಲಿರಬಹುದು. ಆಗ ಶ್ರೀಮಾನ್ ಅಣ್ಣರಾಯರು ಮಂತ್ರಿಗಳಾಗಿದ್ದರು ತಾವು (ಮಾನ್ಯ ಅಧ್ಯಕ್ಷರು). ಈ ಸಭೆಯ ಸದಸ್ಯರಾಗಿ ಮಾನ್ಯ ಶ್ರೀಮಾನ್ ಆಳ್ವರವರು

ಈಗ ಕುಳಿತುಕೊಳ್ಳುತ್ತಿರುವ ಸ್ಥಳದಲ್ಲಿ ಕುಳಿದ್ದುಕೊಳ್ಳುತ್ತಿದ್ದಿರಿ. 57ನೇ ಇಸವಿಯಲ್ಲಿ ನಡೆದದ್ದು ನನಗೆ ಇನ್ನೂ ಜ್ಞಾಪಕದಲ್ಲೇ ಇದೆ. ತಾವು ಆಗ ಲೆಜಿಸ್ಲೇಟರಾಗಿ ಈ ತರಹ ಪ್ರಾವಿಷನ್ನು ಒಂದು ಕೋಟಿಯಷ್ಟು ಹೆಚ್ಚು ಮಾಡುವುದು ಏಕೆ ಎಂಬುದನ್ನು ಕೇಳಿ, ಕೊನೆಗೆ ಎರಡು ಕೋಟಿಯಷ್ಟು ಹೆಚ್ಚು ಹಣಕ್ಕೆ ಒಪ್ಪಿಗೆ ಆಗ ತೆಗೆದುಕೊಂಡಿದ್ದರು. ಈಗ ಪುನಃ ಇಲ್ಲಿಗೆ ಬಂದು ಈಗ ಇರುವ ಎರಡು ಕೋಟಿಯಷ್ಟಕ್ಕಿಂತ ಇನ್ನೂ ಎರಡು ಕೋಟಿಯಷ್ಟು ಕಂಟಿಂಜೆನ್ಸಿ ಫಂಡು ಇರಬೇಕೆಂದು ತಂದಿದ್ದಾರೆ. ಇದನ್ನು ಯಾವ ಎಮರ್ಜನ್ಸಿಗಾಗಿ ಉಪಯೋಗಿಸುತ್ತಾರೆ ಎನ್ನುವುದನ್ನು ಇಲ್ಲಿ ಹೇಳಲಿಲ್ಲ. ಇದಕ್ಕೋಸ್ಕರ ಪುನಃ ಇಲ್ಲೇತಕ್ಕೆ ಇಂತಹ ಬಿಲ್ಲನ್ನು ತರಬೇಕಾಗಿತ್ತು ಎಂದು ನಾನು ಕೇಳುತ್ತೇನೆ. ಅಲ್ಲದೆ ಇಲ್ಲಿ ಇಂತಹ ಎಮರ್ಜೆನ್ಸಿಗಾಗಿ ಖರ್ಚು ಮಾಡುತ್ತೇವೆಂದು ಒಂದೆರಡು ನಿದರ್ಶನಗಳನ್ನಾದರೂ ಹೇಳಿದ್ದರೆ ಅದರ ಮೇಲೆ ಏನಾದರೂ ಒಂದೆರಡು ಮಾತುಗಳನ್ನಾದರೂ ಹೇಳಬಹುದಾಗಿತ್ತು. ಅವಾವುದನ್ನೂ ಹೇಳದೆ ಇಲ್ಲಿ ಸುಮ್ಮನೆ ಪಕ್ಕದ ರಾಷ್ಟ್ರಗಳವರು ಮಾಡಿದ್ದಾರೆಂದು ಹೇಳುತ್ತಾ ಇಲ್ಲೂ ಎರಡು ಕೋಟಿಯಷ್ಟು ಹೆಚ್ಚು ಹಣಬೇಕೆಂದು ಕೇಳುತ್ತಿರುವುದಕ್ಕೆ ನಮಗೆ ನಂಬಿಕೆ ಬರುತ್ತಿಲ್ಲ. ಆದರಿಂದ ತಾವು ಸರಿಯಾದ ಕಾರ್ಯಗಳಿಗೆ ಇದನ್ನು ಉಪಯೋಗಿಸುತ್ತೀರಾ ಎನ್ನುವುದರಲ್ಲಿ ನಮಗೆ ಅನುಮಾನ ಬರುತ್ತಿದೆ. ಇವೊತ್ತು ಆಹಾರ ನೀತಿಯನ್ನು ಅನುಸರಿಸುವುದಕ್ಕಾಗಿ ಸಪ್ಲಿಮೆಂಟರಿ ಗ್ರಾಂಟುಗಳಲ್ಲಿ ಹೇಳಿರುವಂತೆ ಒಬ್ಬರು ಚೀಫ್ ಇಂಜನೀಯರವರನ್ನು ಇನ್‌ವೆಸ್ಟಿಗೇಷನ್ನು ಡಿವಿಜನ್ನು ಮತ್ತಿತರ ಸಿಬ್ಬಂದಿಗಳಿಗಾಗಿ ಹೊಸದಾಗಿ ಕ್ರಿಯೇಟು ಮಾಡಿ ಅದಕ್ಕಾಗಿ ಹಣ ಕೇಳಿದ್ದೀರಿ. ಇದು ನ್ಯಾಯವೇ ? ಅದುದರಿಂದ ಇಲ್ಲಿ ನೀವು ಕೇಳಿರುವ ನಾಲ್ಕು ಕೋಟಿ ಹಣಕ್ಕೆ ನಮ್ಮ ಸಂಪೂರ್ಣ ವಿರೋಧವಿದೆ. ಇದಕ್ಕೆ ಒಪ್ಪಿಗೆ ಕೊಡಲಾಗುವುದಿಲ್ಲ.

Sri RAMAKRISHNA HEGDE.—It is wrong to say that. Expenditure has been made out of reappropriation and because it was a new agency created, it was brought to the notice of the House for its approval.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮೀ, ಇವೊತ್ತು ಇಲ್ಲಿ ತಂದಿರುವ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ತೆಗೆದುಕೊಳ್ಳಿ. ಅದರಲ್ಲಿ ನೋಡಿದರೆ ತಾವು ಬಡ್ಜೆಟ್ಟನ್ನು ಮೊದಲು ಹೊಸದಾಗಿ ತಯಾರು ಮಾಡುವಾಗ ನಿಮ್ಮಲ್ಲಿ ಸರಿಯಾದ ಚಿತ್ರವಿರುವುದಿಲ್ಲ. ಅದಕ್ಕೋಸ್ಕರ ಇಲ್ಲಿ ತಾವೇ ಹೇಳಿರುವಂತೆ ನಾಲ್ಕು ಕೋಟಿ ರೂಪಾಯಿಗಳಷ್ಟು ಹಣವನ್ನು ಕೇಂದ್ರದವರು ವೆಜಿಟಬಲ್ ಗಾರ್ಡನ್ಸ್‌ಗಳನ್ನು ಮಾಡುವುದಕ್ಕಾಗಿ ಕೇಳಿದ್ದಾರೆ.

Mr. SPEAKER.—Wherever the amount asked for is Rs. 100 as a token demand, the expenditure is met by reappropriation. Wherever they have drawn from the Contingency Fund, it is clearly mentioned so.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೇ ನಾನು ಇಲ್ಲಿ ಹೇಳುತ್ತಿದ್ದೇನೆ. ತಮಗೆ ನಾಲ್ಕು ಕೋಟಿಯಷ್ಟು ಕಂಟೆಂಜೆನ್ಸಿ ಫಂಡಿಗಾಗಿ ಹಣವನ್ನು ಕೇಳುವಾಗ ತಮ್ಮ ಮುಂದೆ ಸರಿಯಾದ ಹಾಗೂ ನೈಜವಾದ ಚಿತ್ರ ತಮ್ಮ ಮುಂದೆ ಇರುವುದಿಲ್ಲ. ಆದರಿಂದಾಗಿ ಸುಮ್ಮನೆ ಇಲ್ಲಿಗೆ ಬಂದು ನಾಲ್ಕು ಕೋಟಿಯಷ್ಟು ಹಣಕ್ಕೆ ಮಂಜೂರಾತಿ ಕೊಡಿ ಎಂದು ಇಲ್ಲಿ ಕೇಳುತ್ತಿದ್ದೀರಿ. ಈಗೇನೋ ತಾವು ಇಲ್ಲಿ ನಮ್ಮ ಸೆಷನನ್ನು ಕರೆದಿದ್ದೀರಿ. ಏತಕ್ಕೆಂದರೆ just to respect the Constitution. ಆರು ತಿಂಗಳಿಗೊಮ್ಮೆ ಸೆಷನನ್ನು ಕರೆದೇ ಕರೆಯಬೇಕಾಗುತ್ತೆ ಎಂದು. ಇಲ್ಲದೆ ಹೋದರೆ ಕಾನ್ಸ್‌ಟಿಟ್ಯೂಷನ್ನಿಗೆ ಅಗೌರವ ತೋರಿಸಿದಂತಾಗುತ್ತದೆ ಎಂದು ಇಲ್ಲಿ ಈಗ ಹನ್ನೊಂದು ದಿನದ ಈ ಅಧಿವೇಶನವನ್ನು ಕರೆದಿದ್ದೀರಿ. ಇನ್ನು ಮುಂದೆ ನೀವು ಈ ಸಭೆಯನ್ನು ಕರೆಯುವುದು ಯಾವಾಗ ಅಂದರೆ ಬಡ್ಜೆಟ್ಟು ಸೆಷನ್ನು ಮಾಡುವಾಗಲೇ. ಆಗ ಪುನಃ ಬಡ್ಜೆಟ್ಟು ಸೆಷನ್ನಿನಲ್ಲಿ ಬಂದು ಇನ್ನೊಂದು ಪಟ್ಟಿಯು ಸಪ್ಲಿಮೆಂಟರಿ ಗ್ರಾಂಟು ಎಂದು ತಂದು ನಮ್ಮ ಮುಂದೆ ಇಟ್ಟು ಮಂಜೂರು ಮಾಡಬೇಕೆಂದು ಕೇಳುತೀರಿ. ಅಲ್ಲದೆ ಇಲ್ಲಿ ನಮ್ಮ ಮುಂದೆ ಈಗ ಬಂದು ಮಹಾರಾಷ್ಟ್ರದಲ್ಲಿ ಕಂಟೆಂಜೆಂನ್ಸಿ ಫಂಡನ್ನು ಏರಿಸಿದ್ದಾರೆ, ಮದರಾಸಿನಲ್ಲಿ ಹೆಚ್ಚು ಮಾಡಿದ್ದಾರೆ ಹಾಗೂ ಆಂಧ್ರದವರು ಹೆಚ್ಚು ಮಾಡಿದ್ದಾರೆ, ಅದರಂತೆ ನಾವು ಕೂಡ ಇಲ್ಲಿ ಎರಡು ಕೋಟಿಯಷ್ಟು ಮಾತ್ರ ಹೆಚ್ಚು ಮಾಡುತ್ತೇವೆಂದು ಹೇಳುತ್ತೀರಿ. ಆದರೆ ನೀವು ಇವೊತ್ತು ಮದರಾಸಿನವರು ಎಷ್ಟು ಮಟ್ಟಿನ ಕೆಲಸಗಳನ್ನು ಅಲ್ಲಿ ಮಾಡಿದ್ದಾರೋ ಆದರಂತೆ ಇಲ್ಲೂ ಜನಕ್ಕೆ ಅನುಕೂಲವಾಗುವಂತೆ ಕೆಲಸ ಮಾಡಿದ್ದೀರಾ ಎಂದು ಸರಕಾರವನ್ನು ನಾನು ಇಲ್ಲಿ ಕೇಳಬೇಕಾಗಿದೆ. ಮದರಾಸಿನವರು ಏನು ಮಾಡಿದ್ದಾರೆ, ಮಹಾರಾಷ್ಟ್ರದವರು ಏನು ಮಾಡಿದ್ದಾರೆ ಮತ್ತು ಆಂಧ್ರದವರು ಏನು ಮಾಡಿದ್ದಾರೆ ಅದರಂತೆ ನಮ್ಮ ದೇಶದಲ್ಲೂ ಉಪಯೋಗಕರವಾದ ಕೆಲಸಗಳನ್ನೇನಾದರೂ ಮಾಡಿದ್ದೀರಾ ? ಮದರಾಸಿನವರು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ವಿದ್ಯುಚ್ಛಕ್ತಿ ಕೊರತೆ ಇದೆ ಎಂದು ಅಲ್ಲಿನ ಸರಕಾರದವರು ದೆಹಲಿಗೆ ಹೋಗಿ ಒತ್ತಾಯ ಮಾಡಿ ನ್ಯೈವೇಲಿಗೆ ಒಂದು ಹೈಡರ್ ಪವರ್ ಯೋಜನೆಗಾಗಿ ಮಂಜೂರಾತಿಯನ್ನು ತೆಗೆದುಕೊಂಡು ಬಂದು ಕೆಲಸ ಮಾಡುತ್ತಿದ್ದಾರೆ. ಇಲ್ಲಿ ನಮ್ಮ ಸರಕಾರದವರು ಆ ರೀತಿ ಏನಾದರೂ ಮಾಡಿದರೇ ಎಂದು ನೋಡಿದರೆ ಏನೂ ಕಾಣುತ್ತಿಲ್ಲ. ಹೀಗೆ ನಿಮ್ಮಲ್ಲಿ ಯಾವ ಕೆಲಸಕ್ಕೂ ಹಣ ಇಲ್ಲ ಎಂದು ಸೀಮೆಎಣ್ಣೆಗೆ ಹೆಚ್ಚು ತೆರಿಗೆ ಹೇರಬೇಕು ಎಂದು ಹೇಳಿ ಬೆಂಕಿಪೊಟ್ಟಣವನ್ನು ಕೈಬಿಟ್ಟಿರಿ. ಇದರಿಂದ ನಿಮ್ಮ ಕೈಯಲ್ಲಿ ಹೆಚ್ಚು ಹಣ ಕೊಟ್ಟರೆ ಅದು ಸರಿಯಾಗಿ ಉಪಯೋಗವಾಗುತ್ತದೆಯೇ ಎನ್ನುವ ಸಂಶಯ ನಮಗೆ ಬಂದಿದೆ ಅಲ್ಲದೆ ನಿಮಗೆ ಇಷ್ಟು ಹಣ ಏತಕ್ಕಾಗಿ ಬೇಕು ಎನ್ನುವುದಕ್ಕೆ ಇಲ್ಲಿರುವ ಲೆಜಿಸ್ಲೇಟರುಗಳನ್ನಾದರೂ ನಿಮ್ಮ ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಇಲ್ಲಿ ಈ ನಾಲ್ಕು ಕೋಟಿಯಷ್ಟು ಹಣವನ್ನು ಯಾವ ಯಾವ ಬಾಬುಗಳಿಗಾಗಿ ಖರ್ಚು ಮಾಡುತ್ತೀರಿ ಎನ್ನುವುದನ್ನಾದರೂ ಹೇಳಿದ್ದೀರಾ ಎಂದರೆ ಅದೂ ಇಲ್ಲ. ಹಾಗೇನೂ ಮಾಡದೆ ಸುಮ್ಮನೆ ಆರು ತಿಂಗಳಿಗೊಂದು ಸಾರಿ ಈ ಅಸೆಂಬ್ಲಿ ಮುಂದೆ ಬಂದು ಮದರಾಸಿನಲ್ಲಿ ಹೆಚ್ಚು ಗ್ರ್ಯಾಂಟುಗಳು ಬೇಕೆಂದು ಕೇಳಿದ್ದಾರೆ. ಅದರಂತೆ ನಾವೂ ಇಲ್ಲಿ ಹೆಚ್ಚು ಮಾಡಬೇಕಾಗಿದೆ ಎಂದು ಇಲ್ಲಿ ಕೇಳುತ್ತಿದ್ದೀರಿ ? ಇದನ್ನು ಯಾವುದಕ್ಕಾಗಿ ಖರ್ಚು ಮಾಡುತ್ತೀರಿ ! ಇದನ್ನು ನೋಡಿದರೆ ಸುಮ್ಮನೆ ನಿಮ್ಮ ಮನಸ್ಸಿಗೆ ಬಂದಂತೆ ಮನಸ್ವಿಯಾಗಿ ಖರ್ಚು ಮಾಡಬೇಕು ಎನ್ನುವ ಮನೋಭಾವವನ್ನು ನೀವು ಬಿಡಬೇಕು. ಯಾವ ಉದ್ದೇಶಕ್ಕಾಗಿ ಈ ಹಣವನ್ನು ಖರ್ಚು ಮಾಡುತ್ತೀರಿ ಎನುವುದನ್ನೂ ಇಲ್ಲಿ ಹೇಳಲಿಲ್ಲ. ಆದುದರಿಂದ ನಾನು ಸಲಹೆ ಮಾಡುವುದು ಈಗ ಇಲ್ಲಿ ನಾಲ್ಕು ಕೋಟಿ ಎಂದು ಕೇಳುವುದಕ್ಕೆ ಬದಲಾಗಿ ಮೂರು ಕೋಟಿಯಷ್ಟು ಎಂದು ಹೆಚ್ಚು ಮಾಡಿ ಇಟ್ಟುಕೊಳ್ಳುವುದು ಸೂಕ್ತ ಎಂದು ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸ್ವಾಮಿ, ನಾಲ್ಕು ಕೋಟಿಯಷ್ಟು ಹಣಬೇಕು ಎಂದು ಇಲ್ಲಿ ನಾವು ಮಂಜೂರಾತಿ ಕೊಟ್ಟರೆ ಕುದುರೆಗೆ ಲಂಗು ಲಗಾಮಿಲ್ಲದೆ ಬಿಟ್ಟರೆ ಅದು ಯಾವ ರೀತಿ ಓಡುತ್ತದೋ ಅದರಂತೆ ನಮ್ಮ ಸರ್ಕಾರದವರು ಸ್ವೇಚ್ಛೆಯಾಗಿ ಅವರಿಗೆ ಮನಸ್ಸಿಗೆ ಬಂದಂತೆ ಖರ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ. ಇಂತಹ ನಿಮ್ಮ ನೀತಿ ಸರಿಯಾದುದಲ್ಲ. ಹಿಂದೆ ಇಲ್ಲಿಯವರೆಗೂ ನೀವು ಅನುಸರಿಸಿಕೊಂಡು ಬಂದಿರುವ ನೀತಿಗಳನ್ನು ನೋಡಿದರೆ ನಿಮ್ಮಲ್ಲಿ ಅನುಮಾನ ಬರುವಂತಾಗಿದೆ. ಆದುದರಿಂದ ಈಗ ಇಲ್ಲಿ ನಾಲ್ಕು ಕೋಟಿಯಷ್ಟು ಹೆಚ್ಚು ಹಣಕ್ಕೆ ಮಂಜೂರಾತಿ ಕೊಡುವುದಕ್ಕಿಂತ ಇದಕ್ಕಾಗಿ ಸುಮಾರು 20 ಲಕ್ಷವೋ ಇಲ್ಲ 50 ಲಕ್ಷವೋ ಹಣ ಬೇಕೆಂದು ಕೇಳಿದ್ದರೆ ಕೊಡಬಹುದಾಗಿತ್ತು. ಇಷ್ಟು ಹೆಚ್ಚು ಹಣ ನಿಮ್ಮ ಕೈಗೆ ಕೊಟ್ಟರೆ ಇನ್ನು ಕೆಲವೇ ದಿನಗಳಲ್ಲಿ ಮೈಸೂರು ಸರಕಾರ ದಿವಾಳಿಯಾಗುವ ಮಟ್ಟಕ್ಕೆ ಬರುತ್ತದೆ. ಅದಕ್ಕಾಗಿ ನೀವು ಏನೇನು ಕೆಲಸಗಳನ್ನು ಸಾಧಿಸಿದ್ದೀರಿ ಎನ್ನುವುದನ್ನು ನಮಗೆ ವಿವರಗಳೊಂದಿಗೆ ತಿಳಿಸಬೇಕು ಎಂದು ಕೇಳಿದರೆ ಅದಕ್ಕೆ ಮಾನ್ಯ ಅಧ್ಯಕ್ಷರು ಇಲ್ಲಿ ನನಗೆ ಒಂದು ಎರಡು ಗಂಟೆಗಳಷ್ಟು ಕಾಲಾವಕಾಶ ಕೊಟ್ಟರೆ ಪೂರ್ಣವಾಗಿ ಹೇಳಬಹುದು ಮತ್ತು ವಿಸ್ತಾರವಾಗಿ ಹೇಳಬಹುದು. ಈಗ ಅದಕ್ಕೆ ಅವಕಾಶವಿಲ್ಲ. ಆದುದರಿಂದ ನಾವು ಇದನ್ನು ಸಂಪೂರ್ಣವಾಗಿ ವಿರೋಧಿಸುತ್ತೇವೆ.

†ಶ್ರೀ ಬಿ. ಕೆ. ಪುಟ್ಟಯ್ಯ.—ಸ್ವಾಮೀ, ಈ ಬಿಲ್ಲನ್ನು ನೋಡಿದರೆ ನಮಗೆ ಬಹಳ ಆಶ್ಚರ್ಯವಾಗುತ್ತದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ವರ್ಷಕ್ಕೆ ಮೂರು ಸಾರಿ ಅಸೆಂಬ್ಲಿ ಅಧಿವೇಶನವನ್ನು ಕರೆಯುತ್ತೇವೆ, ಅದರಿಂದ ನಿಮಗೆಲ್ಲಾ ಬಹಳ ಅನುಕೂಲವಾಗುತ್ತದೆ ಎಂದು ಹೇಳಿದರು. ಈಗಾಗಲೇ ಅವರು ಹೇಳಿದಂತಹ ಮಾತುಗಳನ್ನು ವಾಪಸು ತೆಗೆದುಕೊಂಡಿದ್ದಾರೆಂದು ನನಗೆ ಭಾಸವಾಗುತ್ತಿದೆ. ಈಗ ಇಲ್ಲಿ ಕೊನೆ ಗಳಿಗೆಯಲ್ಲಿ ಬಂದು ನಮಗೆ ನಾಲ್ಕು ಕೋಟಿಯಷ್ಟು ಹೆಚ್ಚು ಹಣ ಬೇಕೆಂದು ಕೇಳುತ್ತಿದ್ದಾರೆ. ಏತಕ್ಕಾಗಿ ಇಲ್ಲಿ ಬಂದು ಕೇಳುತ್ತಾರೆನ್ನುವುದು ಅರ್ಥವಾಗುತ್ತಿಲ್ಲ. ನನಗಾದರೂ ಅನಿಸುವುದು ಇದೊಂದು ಅಭ್ಯಾಸ ಮಾಡಿಕೊಂಡು ಬಿಟ್ಟಿದ್ದಾರೆ. ಏಕೆಂದರೆ, ಯಾವಾಗಲೂ ನಿಮಗೆ ಇಷ್ಟೊಂದು ಹಣ ಬೇಕು ಎಂದು ನಾವು ಇಲ್ಲಿ ಮಂಜೂರಾತಿ ಕೊಟ್ಟರೆ ಅದರಿಂದ ನಿಮಗೆ ಯಾವ ಲಂಗು ಲಗಾಮೂ ಇಲ್ಲದಂತಾಗಿ ನಿಮ್ಮ ಮನಸ್ಸಿಗೆ ಬಂದಂತೆ ಖರ್ಚುಮಾಡಲು ಒಂದು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇಲ್ಲಿ ಹೇಳುವಾಗ ಬೇರೆ ಸ್ಟೇಟುಗಳಲ್ಲಿ ಮಾಡಿದ್ದಾರೆ, ಅದರಂತೆ ನಾವು ಇಲ್ಲಿ ಮಾಡಬೇಕೆಂದು ಹೇಳಿ ಈ ಬಿಲ್ಲನ್ನು ಇಲ್ಲಿ ತಂದಿದ್ದಾರೆ. ಬೇರೆ ಸ್ಟೇಟುಗಳಲ್ಲಿ ಎಂದರೆ ಮದರಾಸು ಸ್ಟೇಟಿನಲ್ಲಿ ಯಾವ ರೀತಿ ಮುಂದುವರಿದಿದ್ದಾರೆ ನೀವೂ ಕೂಡ ಅದೇ ರೀತಿ ಇಲ್ಲಿ ಮುಂದುವರಿಯುತ್ತಿದ್ದೀರಾ ಎಂದು ಕೇಳಬೇಕಾಗಿದೆ. ನಮ್ಮ ಸಂಸ್ಥಾನದಲ್ಲಿ ಕಳೆದ ಹದಿನೆಂಟು ವರ್ಷಗಳಿಂದಲೂ ಜನಕ್ಕೆ ಅನುಕೂಲವಾಗುವಂತೆ ಏನೇನು ಕೆಲಸಗಳನ್ನು ಮಾಡಿದ್ದೀರಿ ? ಯಾವುದಕ್ಕಾಗಿ ಇಲ್ಲಿ ಬಂದು ನಾಲ್ಕು ಕೋಟಿಯಷ್ಟು ಹೆಚ್ಚು ಹಣ ಬೇಕೆಂದು ಹೇಳುತ್ತಾರೆ, ಅದು ನನಗೆ ಅರ್ಥವಾಗುತ್ತಿಲ್ಲ. ಆದುದರಿಂದ ಇಷ್ಟು ಹೆಚ್ಚು ಹಣಕ್ಕೆ ಒಪ್ಪಿಗೆ ಕೊಡುವುದು ಸರಿಯಲ್ಲ ಎಂದು ಹೇಳಿ ನಾನೂ ಇದನ್ನು ವಿರೋಧ ಮಾಡುತ್ತೇನೆ.

†Sri ANNA RAO GANAMUKHI.—Sir, it is our experience that the Government always spend money outside the Budget. The Budget is there to spend throughout the year and in this age of plan, plan projects and plan provisions, we should not go outside the budget. While we can well understand that in any one item we cannot spend, the other items require more and to appropriate those items the power is with the Government. But the disease with the Government is, promises come in the mid-year, during March, April, May, June and they think of new plans. I can concede when the Government takes up any plan if any assistance is available, because in those cases we cannot think ahead of what will happen with the future; and therefore, we can take up those items. But, what happens is, right in the beginning we do not plan, we do not formulate anything, and just in the mid-year we go on spending and where there is no scope for appropriation, we come with the supplementary budgets, not once but twice or thrice. Therefore, in order to prevent the Governments from exceeding these limits, I think, it is better to have a small limit. After all, it is an equipment; it is not a waste. If we provide money, I am afraid, more plans will spring out of the brains of the officers of the administrative Departments and they will be placed before the Ministers, and the Ministers will be obliged to allot the money.

Mr. SPEAKER.—All these plans will come before the House.

Sri ANNA RAO GANAMUKHI.—We know that. It is only after knowing these things, I am arguing the facts. We must think ahead of one year and in the Budget itself we must provide for all the contingency. It is said that in Madras it is Rs. 7 crores and in Andhra it is much more. Their plan target is also much more, their population is much more, their income is much more, and in many matters they are much ahead of us. Our *per capita* is less. If there is any trouble, if the money is inadequate, then the Minister can come forward and we may give consent to it. But, in the mid-year they come and they want recoupment. Such a procedure would induce the Government to take up new things during the year after the passing of the Budget. That is not good for the country and the Government itself.

Sri RAMAKRISHNA HEGDE.—Sir, the fear that has been expressed by the Hon'ble Members is not only imaginary, but totally unfounded. They are well aware that the Contingency Fund is a mere imprest and whatever amount is drawn from it will have to come before this House for its approval. Not a single paisa can be spent by the Government without the knowledge, approval and blessings of this House. It is not just because the neighbouring States have a larger amount. We want to have a larger amount. Our Budget has been increased. To-day, we are having a bigger Budget of the order of Rs. 125 crores. There are so many things that spring up, sometimes in the middle of the year. The Government of India may prepare some schemes in the middle of the year. Last year, we had to immediately incur an expenditure of more than a Crore of rupees on the food operations.

(SRI RAMAKRISHNA HEGDE)

It is only for this reason, it is necessary that the present corpus that has been found inadequate is to be enlarged. Much has been said about the unbridled freedom and all that. It is perhaps to satisfy themselves. I do not see that there is any point in it. Just because the corpus of this Contingency Fund is enlarged, Government is not going to enjoy all freedom. Therefore, I feel that there is no justification in the criticism that has been made by the Hon'ble Members. I again commend that the Bill may be passed.

Sri C. J. MUCKANNAPPA.—Sir, it is the Tuticorn Thermal Unit for which the Madras Minister got the sanction from the Planning Commission to be taken up in the Third Plan.

Mr. SPEAKER.—The Hon'ble Member said, in his speech, 'hydel unit.'

Sri C. J. MUCKANNAPPA.—Yes, Sir.

Sri RAMAKRISHNA HEGDE.—I am sorry, that is also incorrect, because we have not finalised the Fourth Plan.

Mr. SPEAKER.—Immeterial mistakes! The question is:

"That the Mysore Contingency Fund (Amendment) Bill, 1965, be taken into consideration."

The motion was adopted.

CLAUSE 2.

Mr. SPEAKER.—The question is:

"That clause 2 stand part of the Bill."

The motion was adopted.

Clause 2 was added to the Bill.

CLAUSE 1, THE TITLE AND THE PREAMBLE.

Mr. SPEAKER.—The question is:

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri RAMAKRISHNA HEGDE.—Sir, I move:

"That the Mysore Contingency Fund (Amendment) Bill, 1965 be passed."

Mr. SPEAKER.—The question is :

"That the Mysore Contingency Fund (Amendment) Bill, 1965, be passed."

The motion was adopted.

MYSORE MATERNITY BENEFIT REPEALING BILL, 1965.

Motion to consider.

Sri D. DEVARAJ URS.— Sir, I beg to move :

"That the Mysore Maternity Benefit Repealing Bill, 1965, be taken into consideration."

Mr. SPEAKER.—Motion moved :

"That the Mysore Maternity Benefit Repealing Bill, 1965, be taken into consideration."

7-00 P.M.

Sri D. DEVARAJ URS.—We have a Bill called Mysore Maternity Benefit Act, 1959. This is in operation to-day. Whereas the Central Act is there which has to be adopted all over. To put that Act into operation, we have to pass this Bill. The Central Act says under clause (*b*) of sub-section (3), it should be notified in the Official Gazette before putting it into operation. It should be notified in the Official Gazette in relation to other establishment in the State. Before adopting this Bill. Whenever the Government notifies, from that date this Central Act comes into operation. The Central Act aims at regulating the employment of workers especially women and to give them maternity benefits. It is therefore necessary to repeal the Mysore Maternity Benefit Act, 1959. Hence this Bill. This is a simple Bill and could be passed.

Sri ANNA RAO GANAMUKHI.—If the existing Act is to be repealed, the Central Act should come into being. Supposing the Central Act does not come into operation after notification, there will be vaccuum. There is doubt in my mind about this. The Hon'ble Minister will explain the position. Is it immediately after repealing the existing Act, the Central Act comes into operation ?

Sri D. DEVARAJ URS.—Merely by notification in the respective States, the Act comes into operation according to Section (1) of the Act. If the State merely notifies and puts into operation the Central Act, there will be two Acts. The existing State Act is to be repealed. As soon as this Bill, *i.e.*, the Mysore Maternity Benefit Repealing Bill, is passed, simultaneously, notification will be issued.